


International Journal of Kannada Research
www.kannadajournal.com

**ISSN: 2454–5813**
IJSR 2016; 2(4): 43-47
© 2016 IJKS
www.kannadajournal.com
Received: 10-08-2016
Accepted: 11-09-2016

**ಸಂಶೋಧಕರು**
ಶಂಕರ ಬಲ್ಲೇನಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.
ಮೊಬೈಲ್

**ಮಾರ್ಗದರ್ಶಕರು**
ಡಾ॥ಡಿ.ಟಿ.ಬಸವರಾಜ್ ಎಂ.ಎ.ಪಿಹೆಚ್.ಡಿ
ಪ್ರಾಧ್ಯಾಪಕರು ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತ ಗಂಗೋತ್ರಿ, ಮೈಸೂರು–೬

**Correspondence**
**ಸಂಶೋಧಕರು**
ಶಂಕರ ಬಲ್ಲೇನಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.
ಮೊಬೈಲ್

# :ಶ್ರೀರಂಗಪಟ್ಟಣ ದ್ವೀಪದ ಸ್ಮಾರಕಗಳು:

**ಸಂಶೋಧಕರು, ಮಾರ್ಗದರ್ಶಕರು**

ಶ್ರೀರಂಗಪಟ್ಟಣ ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧವಾದ ಸ್ಥಳ. ಧಾರ್ಮಿಕ ಕೇಂದ್ರ, ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿರುವ, ಮಂಡ್ಯ ಜಿಲ್ಲೆಗೆ ಸೇರಿದ ತಾಲ್ಲೂಕು ಕೇಂದ್ರವಾಗಿದೆ. ಮೈಸೂರಿನಿಂದ 15ಕಿ.ಮೀ, ಮಂಡ್ಯದಿಂದ 25ಕಿ.ಮೀ, ಬೆಂಗಳೂರಿನಿಂದ 125ಕಿ.ಮೀ ದೂರದ ಅಂತರದಲ್ಲಿದೆ.
ಶ್ರೀರಂಗಪಟ್ಟಣ ಊರಿನ ಸುತ್ತ ಕಾವೇರಿ ನದಿ ಹರಿಯುತ್ತದೆ. ಆದ್ದರಿಂದ ಇದು ಒಂದು ದ್ವೀಪ. ಕಾವೇರಿ ನದಿ ಇಂಥ ಅನೇಕ ದ್ವೀಪಗಳನ್ನು ಉಂಟುಮಾಡಿದೆ. ಇವುಗಳಲ್ಲಿ ಮೂರು ದ್ವೀಪಗಳು ಧಾರ್ಮಿಕವಾಗಿ ವಿಶೇಷವಾದವು. ಅವುಗಳೆಂದರೆ ಶ್ರೀರಂಗಪಟ್ಟಣ, ಶಿವನಸಮುದ್ರ, ತಮಿಳುನಾಡಿನಲ್ಲರುವ ಶ್ರೀರಂಗಂ ಈ ಮೂರು ದ್ವೀಪಗಳಲ್ಲಿ ಶ್ರೀ.ರಂಗನಾಥಸ್ವಾಮಿಯ ದೇವಾಲಯವಿದೆ. ಈ ದೇವಾಲಯಗಳನ್ನು ಕ್ರಮವಾಗಿ ಅದಿರಂಗ, ಮಧ್ಯರಂಗ, ಅಂತ್ಯರಂಗ ಎಂದು ಕರೆಯುತ್ತಾರೆ.

**ಪೀಠಿಕೆ:** ಕ್ರಿ.ಶ.9ನೇ ಶತಮಾನದಲ್ಲಿ ಶ್ರೀರಂಗಪಟ್ಟಣ ಪ್ರದೇಶ ಗಂಗರಾಜ್ಯದ ಒಂದು ಭಾಗ ಅಗಿತ್ತೆಂದು ತಿಳಿದುಬರುತ್ತದೆ. 'ಕ್ರಿ.ಶ.894ರಲ್ಲಿ ಗಂಗರಸರ ದಂಡನಾಯಕ ತಿರುಮ್ನಲ್ಲಯ್ಯ ಎಂಬಾತನು ಶ್ರೀರಂಗನಾಥನ ವಿಗ್ರಹ ಸ್ಥಾಪಿಸಿ, ಗುಡಿಯನ್ನು ನಿರ್ಮಿಸಿ, ಶ್ರೀರಂಗಪುರ ಎಂದು ನಾಮಕರಣ ಮಾಡಿದನು' ಎಂಬ ಅಭಿಪ್ರಾಯವಿದೆ. (*1) "ಕ್ರಿ.ಶ.1120ರಲ್ಲಿ ಹೊಯ್ಸಳ ವಿಷ್ಣುವರ್ಧನನ ಸಹೋದರ ಉದಯಾದಿತ್ಯನು ಮೂಲ ಶ್ರೀರಂಗಪಟ್ಟಣವನ್ನು ನಿರ್ಮಿಸಿದನೆಂದು ಕಂಡುಬರುತ್ತದೆ. ಇವನು ಕ್ರಿ.ಶ.1120ರ ಸುಮಾರಿಗೆ ಶ್ರೀರಂಗಪಟ್ಟಣದಲ್ಲಿ ಅಧಿಕಾರಿಯಾಗಿದ್ದನು." (*2)
ವಿಜಯನಗರ ಕಾಲದಲ್ಲಿ ಶ್ರೀರಂಗಪಟ್ಟಣ ಆ ಸಾಮ್ರಾಜ್ಯಕ್ಕೆ ಸೇರಿದ್ದು, "ಕ್ರಿ.ಶ.1454ರಲ್ಲಿ ನಾಗಮಂಗಲವನ್ನು ಆಳುತ್ತಿದ್ದ ತಿಮ್ಮಣ್ಣನೆಂಬ ದಂಡನಾಯಕನು ವಿಜಯನಗರದ ರಾಜರ ಅನುಮತಿ ಪಡೆದು ಶ್ರೀರಂಗಪಟ್ಟಣದಲ್ಲಿ ಕೋಟೆಯನ್ನು ಕಟ್ಟಿಸಿ, ಊರನ್ನು ಅಭಿವೃದ್ದಿ ಪಡಿಸಿದನೆಂದು ಹೇಳಲಾಗಿದೆ." (*3) ಕ್ರಿ.ಶ.1495ರ ವರವಿಗೂ ಅಂದರೆ ಶ್ರೀರಂಗಪಟ್ಟಣವು ವಿಜಯನಗರದ ಅರಸರ ನೇರ ಅಳ್ವಿಕೆಗೆ ಬರುವವರೆಗೂ ತಿಮ್ಮಣ್ಣನ ವಂಶಸ್ಥರು ಈ ಪ್ರದೇಶದ ಉಸ್ತುವಾರಿಯನ್ನು ನೋಡಿಕೊಂಡಿದ್ದರು.
ನಂತರ ವಿಜಯನಗರದ ಅರಸರು ಶ್ರೀರಂಗರಾಯ ಎಂಬ ರಾಜಪ್ರತಿನಿಧಿಯನ್ನು ನೇಮಿಸಿದರು. ಕ್ರಮೇಣ ವಿಜಯನಗರ ಸಾಮ್ರಾಜ್ಯದ ಪ್ರಭಾವ ಕಡಿಮೆಯಾಯಿತು. ವಿಜಯನಗರದ ಕೊನೆಯ ಪ್ರತಿನಿಧಿಯಾದ ತಿರುಮಲರಾಯನನ್ನು ಸೋಲಿಸಿದ ರಾಜ ಒಡೆಯರ್ ಕ್ರಿ.ಶ.1610ರಲ್ಲಿ ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ದ್ವೀಪವನ್ನು ಅಭಿವೃದ್ದಿ ಪಡಿಸಿದುದಾಗಿ ವಿಶ್ಲೇಷಿಸಲಾಗಿದೆ.
ಕೆಲಕಾಲದ ನಂತರ ಒಡೆಯರ್ ಆಡಳಿತದ ಬಲ ಕಡಿಮೆಯಾಯಿತು. ಕ್ರಿ.ಶ.1761ರಲ್ಲಿ ಹೈದರಾಲಿ (1761–82) ಸಿಂಹಾಸನವನ್ನು ಆಕ್ರಮಿಸಿಕೊಂಡನು. ನಂತರ ಇವನ ಮಗ ಟಿಪ್ಪುಸುಲ್ತಾನ್ (1782–99) ಆಳ್ವಿಕೆ ಮಾಡಿದನು. ಕ್ರಿ.ಶ.1799ರಲ್ಲಿ ಬ್ರಿಟೀಷರಿಗೂ, ಟಿಪ್ಪುವಿಗೂ ಘೋರ ಯುದ್ಧ ನಡೆಯಿತು. ಇದನ್ನು ನಾಲ್ಕನೇ ಆಂಗ್ಲೋ–ಮೈಸೂರು ಯುದ್ದ ಎಂದು ಕರೆಯುತ್ತಾರೆ. ಈ ಯುದ್ದದಲ್ಲಿ ಟಿಪ್ಪು ಮರಣ ಹೊಂದಿದನು. ಶ್ರೀರಂಗಪಟ್ಟಣ ಬ್ರಿಟೀಷರ ಕೈವಶವಾಯಿತು. ಈ ನಗರವನ್ನು ಮೈಸೂರು ಒಡೆಯರಿಗೆ ನೀಡಿದರು. ಕೆಲವೇ ದಿನಗಳಲ್ಲಿ ಮೈಸೂರು ಅರಸರು ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ಬದಲಾಯಿಸಿದರು. ಶ್ರೀರಂಗಪಟ್ಟಣ ಕೆಲಕಾಲ ಬ್ರಿಟೀಷರ ಸೈನಿಕ ನೆಲೆಯಾಗಿ ಮಾರ್ಪಟ್ಟಿತು. ಈ ಪಟ್ಟಣದ ಅವನತಿಗೆ ಈ ಬದಲಾವಣೆ ಮುಖ್ಯ ಕಾರಣವಾಯಿತು. ನಂತರ ಬ್ರಿಟೀಷ್ ಸೈನ್ಯವನ್ನು

ಶ್ರೀರಂಗಪಟ್ಟಣದಿಂದ ಬೆಂಗಳೂರಿಗೆ ಸ್ಥಳಾಂತರಿಸಲಾಯಿತು. ಈ ಎಲ್ಲಾ ಬದಲಾವಣೆಗಳಿಂದಾಗಿ ಶ್ರೀರಂಗಪಟ್ಟಣವು ಇಳಿಮುಖವನ್ನು ಕಂಡಿತು. "ಟಿಪ್ಪುಸುಲ್ತಾನನ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ಜನಸಂಖ್ಯೆಯು ಒಂದೇ ವರ್ಷದಲ್ಲಿ ಒಂದೂವರೆ ಲಕ್ಷದಿಂದ ಮೂವತ್ತೆರಡು ಸಾವಿರಕ್ಕೆ ಇಳಿಯಿತು."(*4) 'ಪ್ರಸ್ತುತ 2011ರ ಜನಗಣತಿಯ ಪ್ರಕಾರ ಈ ಪಟ್ಟಣದಿಂದ ಜನಸಂಖ್ಯೆ ಇಪ್ಪತ್ತೈದು ಸಾವಿರ ಮಾತ್ರ ಇರುವುದಾಗಿ ತಿಳಿದು ಬರುತ್ತದೆ.' (*5)

ಈ ಅವಧಿಯಲ್ಲಿ ಇಲ್ಲಿ ಆಳಿದ ರಾಜಮನೆತನಗಳಲ್ಲಿ ಸಾಮಂತರು, ಸುಲ್ತಾನರು ಮತ್ತು ಬ್ರಿಟೀಷರು ಅನೇಕ ದೇವಾಲಯಗಳನ್ನು, ಮಸೀದಿ, ಬಸದಿ, ಚರ್ಚುಗಳನ್ನು, ಸೇತುವೆಗಳನ್ನು, ಕೋಟೆ–ಕಂದಕಗಳನ್ನು, ಮದ್ದುಗುಂಡಿನ ಕೋಠಿಗಳನ್ನು ಇನ್ನಿತರ ಗಟ್ಟಿ–ಮುಟ್ಟಾದ ಕಟ್ಟಡಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಪ್ರಸ್ತುತ ಇವುಗಳೆಲ್ಲವೂ ಸ್ಮಾರಕಗಳಾಗಿ ಪರಿಗಣಿತವಾಗಿವೆ. ಕೆಲವು ಸುಸ್ಥಿತಿಯಲ್ಲಿದ್ದು, ಇನ್ನು ಕೆಲವು ಅವಸಾನದ ಅಂಚಿನಲ್ಲಿವೆ. ಈ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವ ಹೊಣೆಯನ್ನು ರಾಜ್ಯ ಪುರಾತತ್ವ ಇಲಾಖೆ ಮತ್ತು ಕೇಂದ್ರ ಪುರಾತತ್ವ ಇಲಾಖೆಗಳು ವಹಿಸಿಕೊಂಡಿದ್ದು,

ಈ ಕೆಳಕಂಡಂತೆ ಪ್ರಮುಖ ಸ್ಥಳಗಳನ್ನು ಪಟ್ಟಿ ಮಾಡಲಾಗಿದೆ. ಈ ಕಟ್ಟಗಳ ಮಹತ್ವಕ್ಕೆ ಅನುಗುಣವಾಗಿ ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಗಳ ಜವಾಬ್ದಾರಿಗೆ ವಹಿಸಲಾಗಿದೆ.

**:ರಾಜ್ಯ ಸಂರಕ್ಷಿತ ಸ್ಮಾರಕಗಳು:**

1. ಕೃಷ್ಣಮೂರ್ತಿ ಬಂಗಲೆ.
2. ಮುಮ್ಮಡಿ ಕೃಷ್ಣರಾಜ ಒಡೆಯರ ಜನ್ಮಸ್ಥಳ.
3. ಕೋಟೆ.
4. ಎರಡು ಬತೇರಿಗಳು.
5. ಕಾರಾಗೃಹ.
6. ಎಂಟು ಮದ್ದು ಗುಂಡುಗಳ ಕೊಠಿಗಳು.
7. ತೂಗು ಸೇತುವೆ.
8. ಸೇತುವೆ ಸುತ್ತಲಿನ ಕಂದಕ
9. ಎರಡು ರಣಗಂಬಗಳು.
10. ಮೀರ್‌ಸಾಧಕನ ಅರಮನೆಯ ಅವಶೇಷಗಳು.
11. ತುಪ್ಪದ ಕೊಳ.

**:ಕೇಂದ್ರ ಸಂರಕ್ಷಿತ ಸ್ಮಾರಕಗಳು:**

1. ಟುಪ್ಪುಸುಲ್ತಾನನ ಹಳೆಯ ಅರಮನೆ ನಿವೇಶನ ಮತ್ತು ಅವಶೇಷಗಳು.
2. ಕರ್ನಲ್ ಬೇಲಿಯ ಕಾರಾಗೃಹ.
3. ದರಿಯಾ ದೌಲತ್‌ಬಾಗ್.
4. ಟಿಪ್ಪುಸುಲ್ತಾನನ ಘೋರಿ ಇರುವ ಗುಮ್ಮಟ.
5. ಜುಮ್ಮಾ ಮಸೀದಿ.
6. ಶಾಸನ ಕಂಬಗಳು ಮತ್ತು ಕಂಡಿಯ ಬಳಿಯ ಕೋಟೆ ಗೋಡೆಗಳು.
7. ಟಿಪ್ಪುಸುಲ್ತಾನ್ ಮೃತಪಟ್ಟ ಜಾಗ.
8. ನರಸಿಂಹ ದೇವಾಲಯದಲ್ಲಿರುವ ಕಂಠೀರವ ನರಸರಾಜರ ವಿಗ್ರಹ.
9. ಶ್ರೀ.ರಂಗನಾಥಸ್ವಾಮಿ ದೇವಾಲಯ.
10. ಥಾಮಸ್ ಇನ್‌ಮನ್ನನ ಕಾರಾಗೃಹ (*6)

ಶ್ರೀರಂಗಪಟ್ಟಣ ದ್ವೀಪದ ಪಶ್ಚಿಮದಲ್ಲಿ ಉತ್ತರ ಕಾವೇರಿ ನದಿಯ ಬಲದಂಡೆಯ ಮೇಲೆ ಪೂರ್ವಾಭಿಮುಖವಾಗಿರುವ ಶ್ರೀರಂಗನಾಥಸ್ವಾಮಿ ದೇವಾಲಯವು ಒಂದು ಧಾರ್ಮಿಕ ಐತಿಹಾಸಿಕ ಪವಿತ್ರ ಕ್ಷೇತ್ರವಾಗಿದೆ. ಶ್ರೀರಂಗನಾಥಸ್ವಾಮಿಯು ಇಲ್ಲಿ ನೆಲೆಸಿರುವುದರಿಂದ ಈ ಕ್ಷೇತ್ರಕ್ಕೆ 'ಶ್ರೀರಂಗಪಟ್ಟಣ' ಎಂಬುದಾಗಿ ಕರೆಯಲಾಗಿದೆ. ದೇವಾಲಯದ ಹೆಬ್ಬಾಗಿಲಿನ ಗೋಪುರವು ಸುಮಾರು ಅರವತ್ತು ಅಡಿ ಎತ್ತರವಾಗಿದ್ದು, ಶಿಲ್ಪ ಕಲಾಕೃತಿಗಳಿಂದ ಕೂಡಿದೆ. ದೇವಾಲಯದ ಒಳಗೆ ಮೂರು ವಿಶಾಲವಾದ ಪ್ರಾಕಾರ ಮತ್ತು ನಾಲ್ಕನೇಯ ಪ್ರಾಕಾರದಲ್ಲಿ ಗರ್ಭಗುಡಿ ಇರುವುದನ್ನು ಕಾಣಬಹುದು.

"ಕ್ರಿ.ಶ.894ರಲ್ಲಿ ಗಂಗರಸರ ದಂಡನಾಯಕ 'ತಿರುಮಲ್ಲಯ್ಯ' ಎಂಬಾತನು ಶ್ರೀರಂಗಪಟ್ಟಣದ ಶ್ರೀರಂಗನಾಥನ ವಿಗ್ರಹ ಮತ್ತು ಗುಡಿಯನ್ನು ನಿರ್ಮಿಸಿದರ ಬಗ್ಗೆ ಶಿಕಾರಿಪುರದ ಒಂದು ಶಾಸನದಲ್ಲಿ ಉಲ್ಲೇಖವಿದೆ. ಆದರೆ ಆ ಶಾಸನವಿಂದು ಲಭ್ಯವಿಲ್ಲ." (*7) ಕ್ರಿ.ಶ.1120ರಲ್ಲಿ ಹೊಯ್ಸಳರ ಅಧಿಕಾರಿಯಾಗಿದ್ದ ಉದಯಾದಿತ್ಯನು ಈ ದೇವಾಲಯದ ಗರ್ಭಗೃಹ, ಸುಖನಾಸಿ ಮತ್ತಿತರ ಒಳಪ್ರಾಕಾರಗಳನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಕ್ರಿ.ಶ.1454ರಲ್ಲಿ ವಿಜಯನಗರದ ದಂಡನಾಯಕ ತಿಮ್ಮಣ್ಣ ಹೆಬ್ಬಾರನು ಈ ದೇವಾಲಯದ ಹೊರ ಪ್ರಾಕಾರದ ಗೋಡೆ, ಗೋಪುರ, ಮಹಾದ್ವಾರ ಮತ್ತು ಎತ್ತರವಾದ ಗರುಡಗಂಬವನ್ನು ನಿರ್ಮಿಸಿದನೆಂದು ಹೇಳಲಾಗಿದೆ. ಕ್ರಿ.ಶ.1600ರ ವೇಳೆಗೆ ವಿಜಯನಗರದ ಪ್ರತಿನಿಧಿ ಶ್ರೀರಂಗರಾಯನ ಕಾಲದಲ್ಲಿ ವಿಸ್ತರಣಾ ಕಾರ್ಯ ನಡೆದಿದ್ದು, ಈಗಲೂ ಇಲ್ಲಿನ ರಂಗನಾಯಕಿ ದೇವಿಯ ಮೂಗಿನಲ್ಲಿರುವ ಮುತ್ತಿನ ಮೂಗುತಿ ಶ್ರೀರಂಗರಾಯನ ಮಡದಿ ಅಲಮೇಲಮ್ಮನದೇ ಎಂಬ ಅಭಿಪ್ರಾಯವಿದೆ. ಕ್ರಿ.ಶ.1610 ರ ನಂತರ ಅಧಿಕಾರಕ್ಕೆ ಬಂದ ಮೈಸೂರು ಒಡೆಯರು, ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಈ ದೇವಾಲಯವನ್ನು ಅಬಿವೃದ್ಧಿ ಪಡಿಸಿದರೆಂದು ಹೇಳಲಾಗಿದೆ.

ದ್ರಾವಿಡ ಶೈಲಿಯಲ್ಲಿರುವ ಈ ದೇವಾಲಯ ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿದೆ. ವರ್ಷಪೂರ್ತಿ ಹಲವಾರು ಧಾರ್ಮಿಕ ಕಾರ್ಯಗಳು ಕಂಡುಬರುತ್ತವೆ. ಪ್ರಸ್ತುತ ಈ ದೇವಾಲಯವು ಭಾರತೀಯ ಪುರತತ್ವ ಇಲಾಖೆಯ ಸಂರಕ್ಷಣೆಯಲ್ಲಿದ್ದು, ಈ ದ್ವೀಪದ ಪ್ರಮುಖ ಪ್ರವಾಸಿಕೇಂದ್ರ ಮತ್ತು ಸ್ಮಾರಕವಾಗಿ ಕಂಡುಬರುತ್ತದೆ.

ಶ್ರೀರಂಗನಾಥಸ್ವಾಮಿ ದೇವಾಲಯದ ನೈರುತ್ಯಕ್ಕೆ 150 ಮೀಟರ್ ದೂರದಲ್ಲಿ 'ಲಾಲ್‌ಮಹಲ್' ಎಂದು ಕರೆಯಲ್ಪಡುವ ಟಿಪ್ಪುವಿನ ಅರಮನೆಯ ಅವಶೇಷವಿದೆ. "ಅರಮನೆ ಇದ್ದ ಸ್ಥಳದಲ್ಲಿ ನಡೆಸಿದ ಶೋಧನೆಯಿಂದ ಇಲ್ಲಿ 40 ಫ಼ಿ 30 ಮೀಟರ್ ವಿಸ್ತೀರ್ಣದಲ್ಲಿ ದೊಡ್ಡ ದಿವಾನ್‌ಖಾನೆ ಇರುವುದು ತಿಳಿದುಬರುತ್ತದೆ." (*8) ಈ ಕಟ್ಟಡದಲ್ಲಿ ಬೃಹತ್ ಗೋಡೆಗಳು ಮತ್ತು ಅಂತಃಪುರದ ಕೋಣೆಗಳನ್ನು ಕಾಣಬಹುದು ಮೇಲಂತಸ್ತುಗಳನ್ನು ಹೊಂದಿದ್ದು, ಈ ಮೇಲಂತಸ್ತಿಗೆ ಹೋಗಲು ಮೆಟ್ಟಿಲುಗಳಿದ್ದ ಗುರುತುಗಳು ಈಗಲೂ ಕಂಡುಬರುತ್ತವೆ. ಕೊಠಡಿಗಳಿದ್ದ ಕುರುಹುಗಳು ಇವೆ. ಇಲ್ಲಿ ಸುಸಜ್ಜಿತ ವಾಚನಾಲಯವಿತ್ತು, ಟಿಪ್ಪುವಿನ ಕಾಲದಲ್ಲಿ ಧರ್ಮ, ಸಾಹಿತ್ಯ, ಇತಿಹಾಸ ಮತ್ತು ನ್ಯಾಯಶಾಸ್ತ್ರಕ್ಕೆ ಸಂಬಂಧಸಿದ ಅನೇಕಪುಸ್ತಕಗಳು ಇದ್ದವು. ಎಂಬುದಾಗಿ ಹೊರ ಫಲಕದಲ್ಲಿ ಬರೆಯಲಾಗಿದೆ. "ನಾಲ್ಕನೇ ಮೈಸೂರು ಯುದ್ದದ ಸಂದರ್ಭದಲ್ಲಿ ಭಗ್ನಗೊಂಡಿದ್ದ ಈ ಅರಮನೆಯನ್ನು ಕ್ರಿ.ಶ.1807–1809ರಲ್ಲಿ ಕರ್ನಲ್ ವೆಲ್ಲೆಸ್ಲಿಯು ನೆಲಸಮಗೊಳಿಸಿದನೆಂದು ತಿಳಿದುಬರುತ್ತದೆ." (*9) ಪ್ರಸ್ತುತ ಇದರ ಅವಶೇಷಗಳು ಕೇಂದ್ರ ಸಂರಕ್ಷಣಾ ಇಲಾಖೆಯ ರಕ್ಷಣೆಯಲ್ಲಿವೆ.

'ಕರ್ನಲ್‌ವಿಲಿಯಂ ಬೇಲಿ ಡಂಜನ್' ಉತ್ತರ ಕಾವೇರಿ ನದಿ ದಂಡೆಯ ಶ್ರೀರಂಗನಾಥ ದೇವಾಲಯದ ಉತ್ತರಕ್ಕೆ ಕಂಡುಬರುತ್ತದೆ. "ಕ್ರಿ.ಶ.1782ರಲ್ಲಿ ನಡೆದ ಎರಡನೇ ಆಗ್ಲೋ–ಮೈಸೂರು ಯುದ್ದಲ್ಲಿ

ಬ್ರಿಟೀಷ್ ಆಧಿಕಾರಿ ಕರ್ನಲ್‌ಬೇಲಿ ಸೆರೆ ಸಿಕ್ಕನು, ಇವನನ್ನು ನೆಲಮಾಳಿಗೆಯ ಸೆರೆಮನೆಯಲ್ಲಿ ಬಂದಿಸಿಡಲಾಯಿತು. ಇವನು ಇಲ್ಲಿಯೇ ಮರಣ ಹೊಂದಿದನು. ಅಂದಿನಿಂದ ಕರ್ನಲ್ ವಿಲಿಯಂ ಬೇಲಿ ಡಂಜನ್ ಎಂದೇ ಪ್ರಸಿದ್ದಿಯಾಗಿದೆ." (*10) ಈ ಡಂಜನ್ 100 ಘಿ 40 ಚದರ ಅಡಿ ವಿಸ್ತಾರವನ್ನು ಹೊಂದಿದೆ. ಗುಪ್ತವಾಗಿರುವ ಈ ಸೆರಮನೆಗೆ ಮೆಟ್ಟಿಲುಗಳನ್ನು ಇಳಿದು ಹೋಗಬೇಕು. ವೆಜ್ಜವಿರುವ ಕಲ್ಲಿನ ಗೂಟಗಳನ್ನು ಗೋಡೆಯಲ್ಲಿ ಸಾಲಾಗಿ ನೆಟ್ಟಿದ್ದಾರೆ. ಸರಪಳಿಯಿಂದ ಕಲ್ಲಿನ ಗೂಟಗಳಿಗೆ ಖೈದಿಗಳ ಕೈಗಳೆರಡನ್ನು ಬಿಗಿದು ಕಟ್ಟುತ್ತಿದ್ದರೆಂದು ತಿಳಿದುಬರುತ್ತದೆ. ಯುದ್ದದ ಸಂದರ್ಭದಲ್ಲಿ ಬಿದ್ದಿರಬಹುದೆಂಬ ಜನಾಭಿಪ್ರಾಯವಿರುವ ಫಿರಂಗಿಯೊಂದಿದೆ. ವಿಚಾರ ಮಾಡಿ ನೋಡಿದರೆ ಫಿರಂಗಿಯಿಂದ ಹಾರಿದ ಗುಂಡು ಬೀಳಬಹುದೇ ಹೊರತು ಫಿರಂಗಿಯೇ ಬಂದು ಬೀಳಲು ಸಾಧ್ಯವಿಲ್ಲ.

ಛಾವಣಿಯು ಛಿದ್ರತೆ ಕೂಡ ಹಾರಿಬಿದ್ದುದರ ರಭಸ ಮತ್ತು ಪರಿಣಾಮಕ್ಕೆ ಹೊಂದಿಕೆಯಾಗುತ್ತಿಲ್ಲ. ಹಾಗಾಗಿ ಈ ಜನಾಭಿಪ್ರಾಯ ತರ್ಕಬದ್ದ ಎನಿಸುವುದಿಲ್ಲ. ಈ ಫಿರಂಗಿ ಈಗಲೂ ಅಲ್ಲಿಯೇ ಇದೆ.

'ದರಿಯಾ ದೌಲತ್‌ಬಾಗ್' ಎಂಬ ಟಿಪ್ಪುವಿನ ಅರಮನೆಯು ಕೋಟೆಯ ಪೂರ್ವಕ್ಕೆ ಸಂಗಮಕ್ಕೆ ಹೋಗುವ ದಾರಿಯಲ್ಲಿ ಕಂಡು ಬರುತ್ತದೆ. ಶೇಕಡ 70 ಭಾಗ ಮರವನ್ನು ಬಳಸಿ ಕಟ್ಟಿರುವುದರಿಂದ ಬೇಸಿಗೆಯಲ್ಲಿಯೂ ತಂಪಾಗಿರುತ್ತದೆ. ಆದ್ದರಿಂದ 'ಬೇಸಿಗೆ ಅರಮನೆ' ಎಂತಲೂ ಕರೆಯುತ್ತಾರೆ. "ಕ್ರಿ.ಶ.1784ರಲ್ಲಿ ನಿರ್ಮಿಸಿದ್ದು, ರಾಯಭಾರಿಗಳಿಗೆ, ಅತಿಥಿಗಳಿಗೆ ಇಲ್ಲಿ ಸತ್ಕರಿಸಲಾಗುತ್ತಿತ್ತೆಂದು ತಿಳಿದುಬರುತ್ತದೆ." (*11) ಅರಮನೆಯ ಬಿತ್ತಿಯಲ್ಲಿ ಆವರಿಸಿರುವ ಬಣ್ಣ ಬಣ್ಣದ ಚಿತ್ರಗಳು, ಯುದ್ದ ಸನ್ನಿವೇಶಗಳನ್ನು ವರ್ಣಿಸುವಂತಿವೆ. "ಶ್ರೀರಂಗಪಟ್ಟಣ ಪತನಾ ನಂತರ ಸ್ವಲ್ಪಕಾಲ ಇದು ಕರ್ನಲ್‌ವೆಲ್ಲೆಸ್ಲಿಯ (1799–1805) ವಾಸಸ್ಥಾನವಾಗಿತ್ತಂತೆ, ಅವನ ಆದೇಶದಂತೆ ಹಿಂದೆ ಅಲ್ಲಿಂದ್ದ ಬಿತ್ತಿವರ್ಣ ಚಿತ್ರಗಳನ್ನು ಪುನಃರಚಿಸಿದ್ದು, ಮುಂದೆ ಲಾರ್ಡ್‌ಡಾಲ್ ಹೌಸಿಯ ಸೂಚನೆಯಂತೆ ಕ್ರಿ.ಶ.1855ರಲ್ಲಿ ಶಿಥಿಲವಾಗಿದ್ದ ಈ ವರ್ಣಚಿತ್ರಗಳನ್ನು ಪುನರ್ ಊರ್ಜಿತಗೊಳಿಸಲಾಯಿತೆಂದು ತಿಳಿದುಬರುತ್ತದೆ." (*12)

ಬ್ರಿಟೀಷ್, ಫ್ರೆಂಚ್, ಮರಾಠ, ನಿಜಾಮ ಮತ್ತು ದೇಶೀಯ ಪಾಳೇಗಾರರ ಸೈನಿಕರನ್ನು ಚಿತ್ರಿಸುವಲ್ಲಿ ಕಲಾವಿದರು ಸಾಂಸ್ಕೃತಿಕ ಅಂಶಗಳಿಗೆ ನೀಡಿರುವ ಒತ್ತು ಗಮನಾರ್ಹವಾಗಿದೆ. ಕ್ರಿ.ಶ.1959ರಿಂದೇಚೆಗೆ 'ವಸ್ತು ಸಂಗ್ರಹಾಲಯ' ವನ್ನಾಗಿ ಮಾರ್ಪಡಿಸಿ ಸಂರಕ್ಷಿಸಿಡಲಾಗಿದೆ.

'ಗುಂಬಸ್' ಎಂದರೆ ಸಮಾಧಿಗಳ ಸಮುಚ್ಚಯ ಎಂದರ್ಥ. ಇಲ್ಲಿ ಹೈದರ್, ಟಿಪ್ಪು ಮತ್ತು ಅವರ ಕುಟುಂಬದ ಸದಸ್ಯರುಗಳ ಸಮಾಧಿಗಳಿವೆ. ಕ್ರಿ.ಶ.1784ರಲ್ಲಿ ನಿರ್ಮಿಸಿರಬಹುದಾದ ಗುಂಬಸ್‌ನ ಲಾಲ್‌ಬಾಗ್ ಪರಿಸರವನ್ನು ಫಲ, ಪುಷ್ಪ, ವೃಕ್ಷ, ಹಸಿರು ಹುಲ್ಲಿನ ಹಾಸಿನಿಂದ ಶ್ರೀಮಂತಗೊಳಿಸಲಾಗಿದೆ. ಗುಮ್ಮಟವು ಚಾವಣಿ ಇರುವ ಚೌಕಾಕಾರದ ತಳವಿನ್ಯಾಸದಿಂದ ಕೂಡಿದೆ. "ದಂತ ಕೆತ್ತನೆ ಇರುವ ಗುಂಬಜಿನ ಕೆಲವು ಮರದ ಬಾಗಿಲುಗಳನ್ನು ಲಾರ್ಡ್‌ಡಾಲ್ ಹೌಸಿಯು ಕ್ರಿ.ಶ.1855ರಲ್ಲಿ ಮಾಡಿಸಿದನೆಂದು ತಿಳಿದುಬರುತ್ತದೆ." (*13) ಪ್ರತಿನಿತ್ಯ ಆರಾಧಿಸಲ್ಪಡುವ ಈ ಗುಂಬಸ್‌ನಲ್ಲಿ ಪ್ರತಿ ವರ್ಷ ಟಿಪ್ಪು ಉರುಸ್ ಆಚರಿಸುವುದು ಕಂಡುಬರುತ್ತದೆ. ಟಿಪ್ಪು ವೇದಿಕೆ ಪಕ್ಕದಲ್ಲೇ ಮಸೀದಿ ಇದೆ. ಉತ್ತಮವಾದ ಗ್ರಂಥಾಲಯವೂ ಕಂಡುಬರುತ್ತದೆ.

'ಜುಮ್ಮಾ ಮಸೀದಿ' ಯನ್ನು ಟಿಪ್ಪುಸುಲ್ತಾನನು ಕ್ರಿ.ಶ.1787ರಲ್ಲಿ ಇದನ್ನ ಕಟ್ಟಿಸಿದನೆಂದು ತಿಳಿದುಬರುತ್ತದೆ. ಸೊಬಗು ಮತ್ತು ಗಾಂಭೀರ್ಯದಿಂದ ಕೂಡಿದ ಎರಡು ಬೃಹತ್ ಮಿನಾರುಗಳನ್ನು ಹೊಂದಿರುವ ಜುಮ್ಮಾ ಮಸೀದಿಯು ಒಂದು ಆಕರ್ಷಕ ಕಟ್ಟಡ, ಆದರ ತುದಿಯನ್ನು ಮುಟ್ಟಲು ಒಳಗಿನಿಂದ ಮೆಟ್ಟಿಲುಗಳಿವೆ. ತುದಿಯಲ್ಲಿ ನಿಂತರೆ ಇಡೀ ದ್ವೀಪದ ಸುತ್ತಿಲಿನ ನೋಟವನ್ನು ನೋಡಬಹುದು. ಇದರ ಮಿನಾರುಗಳ ತುದಿಯಲ್ಲಿ ಕಲಶಗಳಿದ್ದು, ಬಹುದೂರದವರೆಗೆ ಕಾಣಿಸುತ್ತವೆ. ಇದನ್ನು 'ದೊಡ್ಡಮಸೀದಿ' ಎಂತಲು ಕರೆಯುತ್ತಾರೆ. ಮುಸಲ್ಮಾನರು ಇದನ್ನು ಇಂದಿಗೂ ಪ್ರಾರ್ಥನಾಲಯವಾಗಿ ಬಳಸುತ್ತಿದ್ದಾರೆ. ಈ ಮಸೀದಿಯಲ್ಲಿ ಮುಸಲ್ಮಾನ್ ಬಾಲಕರಿಗೆ ಧಾರ್ಮಿಕ ಶಿಕ್ಷಣ ನೀಡುವ 'ಜಾಮಿಯಾ ಟಿಪ್ಪು' ಎಂಬ ಮದರಸಗಳಿಗಿಂತ ಭಿನ್ನವಾದ ಶಾಲೆಯೊಂದನ್ನು ನಡೆಸಲಾಗುತ್ತಿದೆ. 'ಅರಾಭಿಕ್ ಮತ್ತು ಫರ್ಷಿಯನ್ ಬಾಷೆ' ಅವುಗಳ ವ್ಯಾಕರಣ, ಕುರಾನ್ ಮುಂತಾದವನ್ನು ಬೋಧಿಸಲಾಗುತ್ತಿದೆ. ವಿದ್ಯಾರ್ಥಿಗಳು ಉಳಿದುಕೊಳ್ಳಲು ಇಲ್ಲಯೇ ವ್ಯವಸ್ಥೆ ಕಲ್ಪಿಸಲಾಗಿದೆ.

'ಟಿಪ್ಪುಸುಲ್ತಾನ್ ಮೃತಪಟ್ಟ ಜಾಗವು' ಒಂದು ಪ್ರಮುಖ ಸ್ಮಾರಕವಾಗಿ ಕಂಡುಬರುತ್ತದೆ. ನಾಲ್ಕನೇ ಆಂಗ್ಲೋ–ಮೈಸೂರು ಯುದ್ದದಲ್ಲಿ ಬ್ರಟೀಷರೊಡನೆ ಹೋರಾಡುತ್ತಲೇ ಕ್ರಿ.ಶ.1799 ಮೇ 04ರಂದು ಕೊನೆ ಉಸಿರೆಳೆದನು. 'ಟಿಪ್ಪುಸುಲ್ತಾನನ ದೇಹ ಸಿಕ್ಕಿದ ಸ್ಥಳ' ವೆಂದು ಕಲ್ಲಿನಲ್ಲಿ ಕೆತ್ತಿಸಲಾಗಿದೆ. ಪ್ರಸ್ತುತ ಪ್ರಮುಖ ಪ್ರವಾಸಿ ಸ್ಥಳವೂ ಆಗಿದ್ದು ಸಂರಕ್ಷಿಸಲ್ಪಟ್ಟಿದೆ.

'ಥಾಮಸ್‌ಇನ್‌ಮನ್ ಕಾರಾಗೃಹ' ವು ಶ್ರೀರಂಗಪಟ್ಟಣ ಕೋಟೆಯ ಈಶಾನ್ಯ ಭಾಗದಲ್ಲಿ ಕಂಡುಬರುತ್ತದೆ. ಕ್ರಿ.ಶ.1895ರಲ್ಲಿ ಥಾಮಸ್‌ಇನ್‌ಮನ್ ಎಂಬುವನು ಬೆಳಿಕೆಗ ತಂದಿದ್ದರಿಂದ ಇದನ್ನು ಅವನ ಹೆಸರಿನಿಂದಲೇ ಕರೆಯಲಾಗುತ್ತಿದೆ. ಬಂದೀಖಾನೆಯು 13.75 ಮೀಟರ್ ಉದ್ದ ಮತ್ತು 9.75 ಮೀಟರ್ ಅಗಲವನ್ನು ಹೊಂದಿದೆ. "ಮೈಸೂರು ಅರಸರ ಕಾಲದಲ್ಲಿ ನಿರ್ಮಿಸಲಾಯಿತೆಂದು ಹೇಳಲಾದ ಈ ಬಂಧಿಖಾನೆಯಲ್ಲಿ ಚಿತ್ರದುರ್ಗದ 5ನೇ ಮದಕರಿನಾಯಕ, ಮಾಗಡಿಯ ಮುಮ್ಮಡಿ ಕೆಂಪೇಗೌಡ ಮತ್ತು ಮರಾಠ ನಾಯಕರು ಸೇರಿದಂತೆ ಅನೇಕರು ಈ ಬಂದೀಖಾನೆಯಲ್ಲಿ ಬಂದಿತರಾಗಿದ್ದುದು ತಿಳಿದುಬರುತ್ತದೆ." (*14) "ಟಿಪ್ಪುಸುಲ್ತಾನನು ಧೋಂಡಿಯಯ ವಾಘ್ ಎಂಬ ಮರಾಠ ಯೋದನನ್ನು ಈ ಸೆರಮನೆಯಲ್ಲಿ ಇಟ್ಟಿದ್ದನೆಂದು ಹೇಳಲಾಗಿದೆ." (*15) ಪ್ರಸ್ತುತ ಈ ಬಂದೀಖಾನೆಯನ್ನು ಕೇಂದ್ರ ಪ್ರಾಚ್ಯವಸ್ತು ಇಲಾಖೆ ಸಂರಕ್ಷಿಸುತ್ತಿದೆ.

'ಶ್ರೀಲಕ್ಷ್ಮೀನರಸಿಂಹ ದೇವಾಲಯ' ವು ಶ್ರೀರಂಗನಾಥ ದೇವಾಲಯದ ಪೂರ್ವಕ್ಕೆ, ಬಲಭಾಗದಲ್ಲಿ ಸುಮಾರು ಐದು ಎಕರೆ ಜಾಗದಲ್ಲಿ ನಿರ್ಮಾಣವಾಗಿದೆ. ಈ ದೇವಾಲಯ ಮೈಸೂರು ಅರಸರು ನಿರ್ಮಿಸಿದ ಪೂರ್ಣಪ್ರಮಾಣದ ದೇವಾಲಯವೆಂದು ಹೇಳಲಾಗುತ್ತದೆ. "ಆದರೆ ಗರ್ಭಗೃಹದ ನರಸಿಂಹಸ್ವಾಮಿ ವಿಗ್ರಹ ಮಾತ್ರ ಹೊಯ್ಸಳರ ಕಾಲದೆಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ." (*16) ಈ ದೇವಾಲಯ ಕಂಠೀರವ ನರಸರಾಜ ಒಡೆಯರ್ ಕಾಲದಲ್ಲಿ (1638–59) ಬಹುಪಾಲು ರಚನೆಗೊಂದಿರುವುದೆಂದು ತಿಳಿದು ಬರುತ್ತದೆ. ಇದರಲ್ಲಿ ವಿಶಾಲವಾದ ಗರ್ಭಗುಡಿ, ಅಗಲ ಮತ್ತು ಉದ್ದನೆಯ ಸುಖನಾಸಿ ಹಾಗೂ ಅನೇಕ ಕಂಬಗಳ ನವರಂಗವಿದೆ.

ರಂಗಮಂಟಪದ ಎಡಭಾಗದ ಕೊಠಡಿಯಲ್ಲಿ ಕೈ ಮುಗಿದು ನಿಂತಿರುವ ಸುಮಾರು ಮೂರುವರೆ ಅಡಿ ಎತ್ತರದ ಮೈಸೂರು ಅರಸರು ಧರಿಸುವ ಪೋಷಾಕು ಮತ್ತು ನಡುವಿನಲ್ಲಿರುವ ಕಠಾರಿ ಸಹಿತ ನಿಂತಿರುವ ಶಿಲ್ಪವೊಂದು ಕಂಡುಬರುತ್ತದೆ. ಈ ಶಿಲ್ಪದ ತಳಭಾಗದಲ್ಲಿ "ಕಂಠೀರವ ನರಸರಾಜ ಒಡಯರ್‌ರವರು" (*17) ಎಂದು ಬರೆಯಲಾಗಿದ್ದು, ಇದು ಲಕ್ಷ್ಮೀನರಸಿಂಹ ದೇವಾಲಯ ನಿರ್ಮಿಸಿದ ಕಂಠೀರವ ಒಡೆಯರ್ ರವರ ಶಿಲ್ಪವಾಗಿದೆ.

'ಸ್ಮಾರಕಕಂಭ' ನಾಲ್ಕನೇ ಮೈಸೂರು ಯುದ್ದದ ನಂತರ ವಿಜಯದ ಸಂಕೇತವಾಗಿ ಬ್ರಿಟೀಷರು ನಿರ್ಮಿಸಿರುವಂತದ್ದು, "ನದಿ ಎರಡಾಗುವ ತುದಿಯಲ್ಲಿ ಲಾರ್ಡ್ ಕರ್ಜನ್ನನ ಕಾಲದಲ್ಲಿ ನಿರ್ಮಿಸಲಾಗಿದ್ದೆಂದು

ತಿಳಿದುಬರುತ್ತದೆ." (*18) ನಯವಾದ ಕಲ್ಲಿನಿಂದ ಮಾಡಲ್ಪಟ್ಟಿದ್ದು, ಚೌಕಾಕಾರವಾಗಿದ್ದು, ತುದಿಯ ಕಡೆಗೆಮೊನಚಾಗುತ್ತಾ ಹೋಗುತ್ತದೆ. ಅದರ ಸುತ್ತ ಫಿರಂಗಿ ಗುಂಡುಗಳನ್ನು ಇಡಲಾಗಿದೆ. ನಾಲ್ಕು ಮುಖಗಳಲ್ಲೂ ಶಾಸನಗಳಿವೆ. 1799ರ ಯುದ್ಧದಲ್ಲಿ ಮಡಿದ ಅಧಿಕಾರಿಗಳ ಮತ್ತು ಭಾಗವಹಿಸಿದ ತುಕಡಿಗಳ ಹೆಸರನ್ನು ಕೆತ್ತಲಾಗಿದೆ. ಪ್ರಸ್ತುತ ರಕ್ಷಿಸುವ ಅಗತ್ಯವಿದೆ.

ಶ್ರೀರಂಗಪಟ್ಟಣ ದ್ವೀಪದಲ್ಲಿರುವ ಸ್ಮಾರಕಗಳನ್ನು ಪ್ರಾಚ್ಯವಸ್ತು ಇಲಾಖೆಯು ಸಂರಕ್ಷಿಸಲ್ಪಟ್ಟಿದ್ದು, ಸುಮಾರು ಹತ್ತು ಸ್ಮಾರಕಗಳನ್ನು ಭಾರತೀಯ ಪುರಾತತ್ವ ಇಲಾಖೆಯು ಸಂರಕ್ಷಿಸಲ್ಪಟ್ಟಿದ್ದರೆ, ಸುಮಾರು ಹನ್ನೊಂದು ರಾಜ್ಯ ಸಂರಕ್ಷಿತ ಸ್ಮಾರಕಗಳೆಂದು ಗುರುತಿಸಲಾಗಿದೆ.

ಇವುಗಳ ಪಟ್ಟಿಯನ್ನು ಈಗಾಗಲೇ ನೀಡಲಾಗಿದ್ದು, ಅವುಗಳನ್ನು ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

'ಕೋಟೆ' ಶ್ರೀರಂಗಪಟ್ಟಣ ದ್ವೀಪದ ರಾಜ್ಯ ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲ್ಪಡುತ್ತಿರುವ ಪ್ರಮುಖ ಸ್ಮಾರಕ. ದ್ವೀಪದ ಪಶ್ಚಿಮದ ಮೂಲೆಯಲ್ಲಿ ಕಟ್ಟಿರುವ ಕೋಟಯು ಮೂರು ಸುತ್ತುಗಳನ್ನು ಹೊಂದಿದೆ. "ಮೊದಲ ಸುತ್ತಿನ ಕೋಟೆಯು ಕ್ರಿ.ಶ.1454ರಲ್ಲಿ ನಾಗಮಂಗಲದ ಪ್ರಭು ತಿಮ್ಮಣ್ಣ ಹೆಬ್ಬಾರನು ನಿರ್ಮಿಸಿದನೆಂದು ತಿಳಿದುಬರುತ್ತದೆ." (*19) ಪೂರ್ವಭಾಗದ ಎರಡನೆಯ ಕೋಟೆಯು ರಾಜ ಒಡೆಯರ್ (1610) ಹಾಗೂ ಕಂಠೀರವ ನರಸರಾಜರ (1654) ಕಾಲದ್ದಾಗಿದೆ. ಚಿಕ್ಕದೇವರಾಜ ಒಡೆಯರು ಒಳಕೋಟೆ, ಹೊರಕೋಟೆ ಹಾಗೂ ಜೀಬಿ ಬಾಗಿಲು ಬಳಿಯ ಕೊತ್ತಲುಗಳಲ್ಲಿ ಫಿರಂಗಿಗಳನ್ನು ಇರಿಸಿದ್ದರೆಂದು ಇತಿಹಾಸದಿಂದ ತಿಳಿದುಬರುತ್ತದೆ.

ಮೂರನೇ ಸುತ್ತಿನ ಕೋಟೆಗೆ ಟಿಪ್ಪುವಿನ ಕಾಲದಲ್ಲಿ (1793) ಹಲವಾರು ಸೇರ್ಪಡೆಗಳಾಗಿವೆ. "ಮೂರು ಸುತ್ತಿನ ಕೋಟೆಯ ದಕ್ಷಿಣ ಭಾಗದಲ್ಲಿರುವ ಮೈಸೂರು ಬಾಗಿಲು ಕಿರಿದಾಯಿತೆಂದು ಹದಿನೈದು ಅಡಿ ಎತ್ತರದ 'ಆನೆಬಾಗಿಲ' ನ್ನು ನಿರ್ಮಿಸಿದನೆಂದು ಬಾಗಿಲ ಮೇಲಿರುವ ಪರ್ಷಿಯನ್ ಶಾಸನದಿಂದ ತಿಳಿದುಬರುತ್ತದೆ." (*20) ಇದನ್ನು ಕ್ರಿ.ಶ.1791ರಲ್ಲಿ ನಿರ್ಮಿಸಿದುದಾಗಿ ಹೇಳಲಾಗಿದೆ. ಪ್ರಸ್ತುತ ಮೈಸೂರು ಮತ್ತು ಆನೆಬಾಗಿಲುಗಳ ನಡುವೆ ದೊಡ್ಡದಾದ ರಸ್ತೆಯನ್ನು ನಿರ್ಮಿಸಲಾಗಿದೆ.

ಈ ಕೋಟೆಗೆ ಎಂಟು ಪ್ರಮುಖ ಬಾಗಿಲುಗಳು ಕಂಡುಬರುತ್ತವೆ. ಇದಕ್ಕಿದ್ದ ಮೂರು ಸುತ್ತುಗಳಲ್ಲಿ ಎರಡು ಸುತ್ತು ಈಗಲೂ ಭದ್ರವಾಗಿವೆ.

'ಕೃಷ್ಣಮೂರ್ತಿ ಬಂಗಲೆ' ಯನ್ನು ಡಾಕ್ಟರ್ ಬಂಗಲೆ, ಲಾರ್ಡ್ ಹಾರಿಸ್ ಬಂಗಲೆ, ಪೂರ್ಣಯ್ಯ ಬಂಗಲೆ, ಪ್ರವಾಸಿ ಮಂದಿರ ಎಂದೆಲ್ಲಾ ಕರೆಯಲಾಗುತ್ತದೆ. ಬ್ರಿಟೀಷರ ಕಾಲದ ಕಟ್ಟಡ ಇದಾಗಿದ್ದು, ನಾಲ್ಕನೇ ಮೈಸೂರು ಯುದ್ದದಲ್ಲಿ ಭಾಗವಹಿಸಿದ ಜನರಲ್ ಹ್ಯಾರಿಸ್ ಇಲ್ಲಿ ವಾಸವಿದ್ದುದಾಗಿ ತಿಳಿದುಬರುತ್ತದೆ. "ದಿವಾನ್ ಪೂರ್ಣಯ್ಯನವರು ಕ್ರಿ.ಶ.1811ರಿಂದ 1812ರವರೆಗೆ ಇಲ್ಲಿಯೇ ವಾಸವಿದ್ದು, ಮರಣ ಹೊಂದಿದರೆಂದು ಹೇಳಲಾಗಿದೆ." (*21)

ಇವರ ಮೊಮ್ಮಗನೇ ದಿವಾನ್ ಕೃಷ್ಣಮೂರ್ತಿ (1901–1906). ಇವರು ದಿವಾನರಾಗಿದ್ದಾಗ ಈ ಬಂಗಲೆಯಲ್ಲಿಯೇ ವಾಸವಿದ್ದುದರಿಂದ ಇವರ ಹೆಸರನ್ನೇ ಅನ್ವರ್ಥವಾಗಿ ಕರೆಯಲಾಗುತ್ತಿದೆ. ಪ್ರಸ್ತುತ ಸರ್ಕಾರಿ ಅಧಿಕಾರಿಗಳ, ಜನಪ್ರತಿನಿಧಿಗಳ, ಪ್ರವಾಸಿಗರ ಸೇವೆಗೆ ಬಳಕೆಯಾಗುತ್ತಿದ್ದು, 'ಪ್ರವಾಸಿಮಂದಿರ' ಎಂದೂ ಕರೆಯುತ್ತಾರೆ.

'ಮುಮ್ಮಡಿ ಕೃಷ್ಣರಾಜ ಒಡೆಯರ್ ಜನ್ಮ ಸ್ಥಳ' ಇಂದು ಸ್ಮಾರಕವಾಗಿ ಮಾರ್ಪಟ್ಟಿದೆ. ಮೈಸೂರು ಒಡೆಯರ್ ಅರಮನೆಯು ಇದೇ ಸ್ಥಳದಲ್ಲಿ ಇತ್ತೆಂದು ಹೇಳಲಾಗುತ್ತಿದೆ. ಶ್ರೀರಂಗನಾಥ ದೇವಾಲಯದ ಎದುರಿನ ಬಲಭಾಗದಲ್ಲಿರುವ ಈ ಮಂಟಪ 18ನೇ ಶತಮಾನದಲ್ಲಿ ನಿರ್ಮಿಸಲಾಗಿದ್ದು, ಪುರಸಭೆಯವರು ನಿರ್ಮಿಸಿರುವ ಉದ್ಯಾನವನದ ಭಾಗದಲ್ಲಿದೆ. ಇದರ ಹಿಂಭಾಗದಲ್ಲಿ ವಿಜಯನಗರದರಸರ ಕಾಲದ 'ತುಪ್ಪದ ಕೋಳವೂ' ಕಂಡುಬರುತ್ತದೆ. ಅಂದರೆ ವಿಜಯನಗರದ ಸಾಮಂತರ ಅರಮನೆಯೂ ಇಲ್ಲಿಯೇ ಇತ್ತೆಂದು ಅಭಿಪ್ರಾಯ ಪಡಬಹುದಾಗಿದೆ. "ಇಲ್ಲಿ ವಿಜಯನಗರ ಅರಸರ ಕಾಲದಲ್ಲಿ ಗ್ರಾನೈಟ್ ಕಲ್ಲಿನಿಂದ ನಿರ್ಮಿಸಲ್ಪಟ್ಟ ಚಿಕ್ಕಕೊಳವಿದ್ದು, ಇದರ ವಿನ್ಯಾಸವು ಹಂಪೆಯಲ್ಲಿನ ಕೊಳವನ್ನು ಹೋಲುತ್ತದೆ." (*22) ಪ್ರಸ್ತುತ ಪುರಸಭೆಯವರ ನಿರ್ವಹಣೆಯಲ್ಲಿದೆ.

'ಬತೇರಿ' ಅಥವಾ 'ಬುರುಜು' ಅಥವಾ 'ವಾಚಿಂಗ್ ಟವರ್' ಗಳನ್ನು ರಕ್ಷಣಾ ದೃಷ್ಟಿಯಿಂದ ಕೋಟೆಯ ಸುತ್ತಲೂ ಆಯಕಟ್ಟಿನ ಜಾಗಗಳಲ್ಲಿ ಕೋಟೆಯ ಮಗ್ಗುಲಲ್ಲೆ ನಿರ್ಮಿಸಲಾಗಿದೆ. ಇವು ಚೌಕಾಕಾರ ಅಥವಾ ಆಯತಾಕಾರದಲ್ಲಿವೆ. "18ನೇ ಶತಮಾನದಲ್ಲಿ ನಿರ್ಮಿಸಿದವುಗಳಾಗಿದ್ದು, ಇವುಗಳನ್ನು ಯುದ್ಧದ ಸಂದರ್ಭದಲ್ಲಿ ಫಿರಂಗಿಗಳನ್ನು ಬಳಸಲು, ಉಳಿದ ದಿನಗಳಲ್ಲಿ ಕಾವಲು ಕಾಯಲು ಬಳಸುತ್ತಿದ್ದುದಾಗಿ ತಿಳಿದು ಬರುತ್ತದೆ." (*23) ಇವುಗಳ ಸುತ್ತಲೂ ಮುಂದಕ್ಕೆ ಚಾಚಿದ ಗೋಡೆಗಳನ್ನು ನಿರ್ಮಿಸಲಾಗಿದೆ. ಫಿರಂಗಿಗಳನ್ನು ಅಕ್ಕ–ಪಕ್ಕಕ್ಕೆ ತಿರುಗಿಸಿ ಮದ್ದನ್ನು ಸಿಡಿಸಲು ಅನುಕೂಲವಾಗುವಂತೆ ರಚಿಸಿರಬಹುದೆಂದು ಹೇಳಬಹುದಾಗಿದೆ.

'ಸಿಡಿಮದ್ದಿನ ಕೋಠಿ' ಅಥವಾ 'ಮದ್ದಿನ ಮನೆ' ಗಳನ್ನು ಟಿಪ್ಪುಸುಲ್ತಾನನು ಎರಡನೇ ಆಂಗ್ಲೋ–ಮೈಸೂರು ಯುದ್ಧದ ನಂತರ ನಿರ್ಮಿಸಿದನೆಂದು ತಿಳಿದುಬರುತ್ತದೆ. ಟಿಪ್ಪು ಆಳ್ವಿಕೆಯ ಕಾಲದಲ್ಲಿ (1782–99) ಬ್ರಿಟೀಷರು ಮತ್ತು ಇತರರು ಶ್ರೀರಂಗಪಟ್ಟಣದ ಮೇಲೆ ಮೇಲಿಂದ ಮೇಲೆ ಯುದ್ಧ ಹೂಡುತ್ತಿದ್ದರು. ಅದರ ಪರಿಣಾಮವಾಗಿ ಕೋಟೆಯ ಒಳಗಡೆ ಅಲ್ಲಲ್ಲಿ ಶಸ್ತ್ರಾಸ್ತ್ರ

ಸಂಗ್ರಹಿಸಲು ಮತ್ತು ಯುದ್ಧ ಸಂದರ್ಭದಲ್ಲಿ ಸುಲಭವಾಗಿ ಸರಬರಾಜು ಮಾಡಲು ಅನುಕೂಲವಾಗುವಂತೆ ಸಿಡಿಮದ್ದಿನ ಕೋಠಿಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಕೋಟೆಯ ಒಳಗಡೆ ಎಂಟು ಮದ್ದಿನ ಮನೆಗಳಿದ್ದು, ಇಂದಿಗೂ ಗಟ್ಟಿ–ಮುಟ್ಟಾಗಿವೆ. ರೈಲ್ವೆ ನಿಲ್ದಾಣದ ಬಳಿ ಇರುವ ಮದ್ದಿನ ಮನೆಯನ್ನು ಜೋಡಿ ರೈಲ್ವೆ ಮಾರ್ಗ ನಿರ್ಮಿಸುವ ಸಲುವಾಗಿ ಸ್ಥಳಾಂತರಿಸಲಾಗುತ್ತಿದೆ.

'ತೂಗು ಸೇತುವೆ' ಅಥವಾ 'ಸ್ಪ್ರಿಂಗ್ ಸೇತುವೆ' ಅಥವಾ 'ಜಗ್ಗು ಸೇತುವೆ' ಯು ಶ್ರೀರಂಗನಾಥ ದೇವಾಲಯದ ದಕ್ಷಿಣಕ್ಕೆ ಸುಮಾರು 100ಮೀಟರ್ ದೂರದಲ್ಲಿ 112 ಅಡಿಗಳ ಅಂತರ ಮತ್ತು ಮೂರು ಅಡಿ ಅಗಲದ ಕಲ್ಲಿನ ಕಮಾನಿದೆ. ಇದರ ಮೇಲೆ ನಿಂತು ಅಲುಗಾಡಿಸಿದರೆ ಎರಡು ಅಥವಾ ಮುರು ಇಂಚುಗಳನ್ನು ತೂಗುತ್ತಿತ್ತೆಂದು ಸ್ಥಳೀಯರಿಂದ ತಿಳಿದುಬರುತ್ತದೆ. ಕ್ರಿ.ಶ.1936ರಲ್ಲಿ ಮುರಿದು ಬಿದ್ದಿದ್ದು, ತೂಗು ಸೇತುವೆಯ ಪಕ್ಕದ ಎರಡು ಗೋಡೆಗಳು ಮಾತ್ರ ಉಳಿದಿವೆ. "ಕ್ರಿ.ಶ.1808ರಲ್ಲಿ ಕರ್ನಲ್ ಡಿ.ಹೆವಿಲ್ಯಾಂಡ್ ಎಂಬ ಫ್ರೆಂಚ್ ಇಂಜಿನಿಯರೊಬ್ಬರು ಏನೋ ಪ್ರಯೋಗಾರ್ಥವಾಗಿ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಿದನೆಂದು ತಿಳಿದುಬರುತ್ತದೆ." (*24) ಕಾವೇರಿ ನದಿಗೆ ಸೇತುವೆಯಾಗಿ ನಿರ್ಮಿಸಲು ಆತ ಯೋಜಿಸಿದ್ದ ಎಂಬ ಸಾಮಾನ್ಯ ಅಭಿಪ್ರಾಯವೂ ಇದೆ.

ಶ್ರೀರಂಗಪಟ್ಟಣದ ಕೋಟೆಯ ಸುತ್ತಲೂ 'ಕಂದಕ' ವನ್ನು ನಿರ್ಮಿಸಲಾಗಿದೆ. ಈ ಕಂದಕಕ್ಕೆ ಕಾವೇರಿ ನದಿಯಿಂದ ನೀರನ್ನು ತುಂಬಿಸಿ, ಶತ್ರುಗಳು ಸುಲಭವಾಗಿ ಕೋಟೆಯ ಒಳಗೆ ಬರದಂತೆ ಮಾಡುವುದು ಉದ್ದೇಶ. ಸ್ವಾಭಾವಿಕವಾದ ಮತ್ತು ಕೃತಕವಾದ ಕಂದಕಗಳು ಕಂಡುಬರುತ್ತವೆ. ಕೋಟೆಯ ಉತ್ತರಭಾಗದಲ್ಲಿ ಸ್ವಾಭಾವಿಕ ಕಂದಕ, ಪಶ್ಚಿಮದಲ್ಲಿ ನದಿ ಇದ್ದು, ನೀರಿನಿಂದ

ಆವೃತವಾಗಿದೆ. ದಕ್ಷಿಣ ಮತ್ತು ಪೂರ್ವದ ಕಡೆ 20–25 ಅಡಿಗಳ ಅಳದ ಕೃತಕ ಕಂದಕವನ್ನು ನಿರ್ಮಿಸಲಾಗಿದೆ. ಪ್ರಸ್ತುತ ಪೂರ್ವದ ಕಂದಕ ಅವಸಾನದತ್ತ ಸಾಗಿದೆ. ದಕ್ಷಿಣದ ಮೂರು ಸುತ್ತಿನ ಕೋಟೆಯ ಕಂದಕವನ್ನು ನವೀಕರಿಸಿ ಜೀರ್ಣೋದ್ಧಾರ ಮಾಡಲಾಗುತ್ತಿದೆ.

'ಮೀರ್‌ಸಾಧಕನ ಅರಮನೆ' ಯು ನಾಲ್ಕನೇ ಮೈಸೂರು ಯುದ್ಧದಲ್ಲಿ ನಾಶವಾಯಿತು ಎಂಬ ಅಭಿಪ್ರಾಯವಿದೆ. ಅರಮನೆಯ ಕಟ್ಟಡ ಹಾಳಾದ ಸ್ಥಿತಿಯಲ್ಲಿದೆ. ರೈಲ್ವೆ ನಿಲ್ದಾಣದ ಪಶ್ಚಿಮಕ್ಕೆ ಕಂಡುಬುರುವ ಈ ಅರಮನಯ ಅವಶೇಷಗಳು ಮಾತ್ರ ಉಳಿದಿರುವುದು ಕಂಡುಬರುತ್ತದೆ.

"ಇಲ್ಲಿನ ಅವಶೇಷಗಳಾದ ಮರದ ಕಂಬಗಳು ಹಾಗೂ ಕಮಾನುಗಳು ಇಸ್ಲಾಮಿಕ್ ಶೈಲಿಯ ವಾಸ್ತು ಕಲೆಯನ್ನು ಬಿಂಬಿಸುತ್ತವೆ." (*25) ಪ್ರಸ್ತುತ ಪಾಳು ಬಿದ್ದಿದ್ದು, ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ಸುತ್ತಲಿನ ಗೋಡೆಗಳು ಮಾತ್ರ ಕಂಡುಬರುತ್ತವೆ.

ಶ್ರೀರಂಗಪಟ್ಟಣ ದ್ವೀಪದಲ್ಲಿ ಈ ಮೇಲ್ಕಂಡ ಸ್ಮಾರಕಗಳಲ್ಲದೆ, ಇನ್ನೂ ಹಲವಾರು ಸ್ಮಾರಕಗಳು ಮಹತ್ವ ಹೊದಿದ್ದರೂ, ಕೆಲವು ರಕ್ಷಣೆ ಇಲ್ಲದೆ ವಿನಾಶದತ್ತ ಹೆಜ್ಜೆ ಇಟ್ಟಿವೆ. ಇನ್ನು ಕೆಲವು ತಮ್ಮದೇ ಆದ ಸೇವಾ ಸಂಸ್ಥೆಯ ಉಸ್ತುವಾರಿ ಇದ್ದರೂ ಅವು ಜೀರ್ಣಾವಸ್ಥೆಯಲ್ಲಿವೆ. ಅಂತಹ ಕೆಲವು ಸ್ಮಾರಕ ಮತ್ತು ದೇವಾಲಯಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

1. ಶ್ರೀಗಂಗಾಧರೇಶ್ವರ ದೇವಾಲಯ.
2. ಅಬೆದುಬುವಾ ಚರ್ಚ್.
3. ಜೈನ ಬಸದಿ.
4. ಝುಂಡಾ ಬತೇರಿ.
5. ವೆಲ್ಲೆಸ್ಲಿ ಸೇತುವೆ.
6. ಬಂಗಾರದೊಡ್ಡಿ ನಾಲೆ.
7. ಕಾವೇರಿ ಸಂಗಮ.
8. ಗುಂಬ್‌ಚಿ ಪ್ರೇಮ ಸೌಧ.
9. ಕರ್ನಲ್ ವಿಲಿಯಂ ಬೇಲಿಯ ಸ್ಮಾರಕ.
10. ಯೂರೋಪಿಯನ್ನರ ಘೋರಿ ಕಲ್ಲುಗಳು.
11. ಕೆಂಪನಂಜಮ್ಮಣ್ಣಿಯವರ ಸಮಾಧಿ ಸ್ಮಾರಕ.
12. ಸ್ನಾನ ಘಟ್ಟ.
13. ಗೋಸಾಯ್‌ಘಟ್ಟ.
14. ಸ್ಕಾಟ್ ಬಂಗಲೆ.
15. ಪಶ್ಚಿಮವಾಹಿನಿಯಲ್ಲಿ ಗಾಂಧಿಜೀ ಚಿತಾಭಸ್ಮ ವಿಸರ್ಜನೆ ಮಾಡಿದುದರ ನೆನಪಾಗಿ ನಿರ್ಮಿಸುವ ಸ್ಮಾರಕ.

ಇವೆಲ್ಲವುಗಳನ್ನು ರಾಜ್ಯ ಮತ್ತು ಕೇಂದ್ರ ಸ್ಮಾರಕ ಸಂರಕ್ಷಣಾ ಇಲಾಖೆಯವರು ಆಧ್ಯತೆ ಮತ್ತು ಅರ್ಹತೆಯ ಅನುಸಾರ 'ಪರಂಪರೆ' ಗೆ ಸೇರಿಸಿಕೊಂಡು ರಕ್ಷಿಸಬೇಕಾದ ಅನಿವಾರ್ಯತೆ ಕಂಡುಬರುತ್ತದೆ.


1. ಮಂಡ್ಯ ಗ್ಯಾಸಟಿಯರ್ ಇತಿಹಾಸ ಪುಟ.49 ಮತ್ತು ಶ್ರೀರಂಗಪಟ್ಟಣ ಪರಂಪರೆ ಪುಟ.11
2. ಮಂಡ್ಯ ಗ್ಯಾಸಟಿಯರ್ ಇತಿಹಾಸ ಪುಟ.54 ಮತ್ತು ಶ್ರೀರಂಗಪಟ್ಟಣ ಪರಂಪರೆ ಪುಟ.9
3. ಸಕ್ಕರೆ ಸೀಮೆ ಹದಿನೈದನೇಯ ನೋಟ–ಪುಟ.329
4. ಶ್ರೀರಂಗಪಟ್ಟಣ ಪರಂಪರೆ ಪುಟ.15
5. ಶ್ರೀರಂಗಪಟ್ಟಣ ಪುರಸಭೆ ದಾಖಲೆಗಳ ಪ್ರಕಾರ.
6. ಶ್ರೀರಂಗಪಟ್ಟಣ ಪರಂಪರೆ ಮಾಲಿಕೆ, ಕರ್ನಾಟಕ ಸರ್ಕಾರ ಪುಟ.70, 71.
7. ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ ಇತಿಹಾಸ ಪುಟ.49
8. ಶ್ರೀರಂಗಪಟ್ಟಣ ಪರಂಪರೆ ಮಾಲಿಕೆ ಪುಟ.21
9. ಅರಮನೆಯ ಹೊರಫಲಕದಲ್ಲಿ ಬರೆಯಲಾಗಿದೆ.
10. ಸಕ್ಕರೆಯ ಸೀಮೆ ಪುಟ.253
11. ಶ್ರೀರಂಗಪಟ್ಟಣ ಪರಂಪರೆ ಮಾಲಿಕೆ ಪುಟ.32
12. ಮಂಡ್ಯ ಸಕ್ಕರೆಯ ನಾಡು ಪುಟ.7
13. ಬಂದೀಖಾನೆಯ ಪರಿಚಯದ ಫಲಕದಿಂದ.
14. ಶ್ರೀರಂಗಪಟ್ಟಣ ಪರಂಪರೆ ಮಾಲಿಕೆ ಪುಟ.30
15. ಶ್ರೀರಂಗಟಪ್ಪಣ ಪರಂಪರೆ ಮಾಲಿಕೆ ಪುಟ.66
16. ಎಪಿಗ್ರಾಫಿಯಾ ಕರ್ನಾಟಕ ಸಂಪುಟ.6, ಶ್ರೀ.ಪ.ಶಾ.32, ಪುಟ.376
17. ಸಕ್ಕರೆ ಸೀಮೆ ಪುಟ.353.
18. ಕನ್ನಡ ವಿಶ್ವಕೋಶ ಸಂಪುಟ.12, ಪುಟ.966
19. ಎಪಿಗ್ರಾಫಿಯಾ ಕರ್ನಾಟಕ ಸಂಪುಟ.6, ಶ್ರೀ.ಪ.ಶಾ.46, ಪುಟ.382
20. ಶ್ರೀರಂಗಪಟ್ಟಣ ಪರಂಪರೆ ಮಾಲಿಕೆ ಪುಟ.52
21. ಶ್ರೀರಂಗಪಟ್ಟಣ ಪರಂಪರೆ ಮಾಲಿಕೆ ಪುಟ.60
22. ಶ್ರೀರಂಗಪಟ್ಟಣ ಪರಂಪರೆ ಮಾಲಿಕೆ ಪುಟ.56
23. ಸಕ್ಕರೆ ಸೀಮೆ ಹದಿನೈದನೆಯ ನೋಟ, ಪುಟ.353
24. ಶ್ರೀರಂಗಪಟ್ಟಣ ಪರಂಪರೆ ಮಾಲಿಕೆ ಪುಟ.59.